ಶ್ರೀ ಎಸ್. ಕೆ. ಕಾಂತಾ.—ಸ್ವಾಮಿ. ಮನೆಗಳನ್ನು ಸ್ವಾಧೀನಕ್ಕೆ ಕೊಡುವುದಕ್ಕೆ ಮುಂಚೆ ಕೆಲವು ಸವಲತ್ತುಗಳನ್ನು ಕೊಡಬೇಕಾಗುತ್ತದೆ ಇಷ್ಟು ಹಣ ಕೊಟ್ಟರೆ ಮಾತ್ರ ಸ್ವಾಧೀನಕ್ಕೆ ಕೊಡುತ್ತೇವೆಂದು ಹೇಳುತ್ತಾರೆ. ಬಡೆಪೂರ ಬಡಾವಣೆಯಲ್ಲಿ ಒಟ್ಟು ೨೦೫ ಮನೆಗಳನ್ನು ಕಟ್ಟಿದ್ದರೂ ಕೇವಲ ೫೯ ಮನೆಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ಮನೆಗಳಿಗೆ ಸವಲತ್ತು ಕೊಡಲಾಗಿದೆಯೆ? ಇನ್ನು ರಾಜಪೂರ ಹತ್ತಿರ ಕಟ್ಟಿರುವ ೧೫ ಮನೆಗಳಲ್ಲಿ ೮ ಮನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬಡವರಿಗೆ ಎಲ್ ಐ.ಜಿ. ಮನೆಗಳನ್ನು ಮಂತ್ತು ಇಡಬ್ಲ್ಯೂ.ಎಸ್. ಮನೆಗಳನ್ನು ಕೊಡಲಾಗುತ್ತದೆ. ೮, ೦೦ ರೂಪಾಯಿಗಳು ಇದ್ದದ್ದು. ೧೬ ರಿಂದ ೧೯ ಸಾವಿರ ರೂಪಾಯಿಗಳಿಗೆ ಆಗಿದೆ. ನಿಯಮಗಳ ಪ್ರಕಾರ ಎಷ್ಟು ಸವಲತ್ತು ಕೊಡುವುದಕ್ಕೆ ಸಾಧ್ಯವೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕಂತು ಕೊಡುವ ವಿಚಾರವನ್ನು ಪರಿಶೀಲನೆ ಮಾಡಲಾಗುವುದು.

ಪ್ರ. ಸ. ೨೫೦ (೭೫೮)

ಒಬ್ಬ ಮಾನ್ಯ ಸದಸ್ಯರು (ಎಸ್. ಡಿ. ಜಯರಾಮ್ ಪರವಾಗಿ).—ಮಾನ್ಯ ಅಧ್ಯಕ್ಷರೆ, ೧೯೭೮ನೇ ಇಸವಿಯಿಂದ ಮನೆ ಕಟ್ಟಲು ಪ್ರಾರಂಭ ಮಾಡಿದ್ದು. ಕೆಲವರಿಗೆ ಮಾತ್ರ ಕೊಟ್ಟಿದ್ದಾರೆ. ಹೆಚ್ಚಿಗೆ ಮನೆಗಳನ್ನು ಕಟ್ಟದೇ ಇರುವುದಕ್ಕೆ ಕಾರಣವೇನು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಕೆಲವು ಕಡೆ ಮನೆಗಳನ್ನು ೭೮ರಿಂದ ಕಟ್ಟಲಾಗಿದ್ದರೂ ಅನೇಕ ಮನೆಗಳನ್ನು ಸರ್ಕಾರಕ್ಕೆ ವಹಿಸಿಕೊಟ್ಟಿಲ್ಲ. ಅವುಗಳಿಗೆ ನೀರಿನ ವ್ಯವಸ್ಥೆ ಒಳಚರಂಡಿ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆಯಾಗಿಲ್ಲ. ಸಮಗ್ರ ಯೋಜನೆಯನ್ನು ಮಾಡಿ, ಗೃಹಮಂಡಲಿಯವರೇ ಜವಾಬ್ದಾರಿ ತೆಗೆದುಕೊಂಡು, ಎಲ್ಲಾ ಕೆಲಸಗಳನ್ನು ಮಾಡುವಂಥ ಒಂದು ಶಾಸನವನ್ನು ತರುತ್ತೇನೆ ಇನ್ನು ಮೂರು ಸಾವಿರ ಚಿಲ್ಲರೆ ಮನೆಗಳನ್ನು ಫಲಾನುಭವಿಗಳಿಗೆ ಕೊಡುವುದಕ್ಕೆ ಆಗಿಲ್ಲ. ಬೇಗ ಮುಗಿಸಿ ಕೊಡುವಂಥ ಕ್ರಮ ತೆಗೆದುಕೊಳ್ಳುತ್ತೇನೆ.

ಕಾಮರಾಜ ರಸ್ತೆಯಲ್ಲಿ ಕಾಮರಾಜರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ

೪೮೨. ಶ್ರೀ ಕೆ. ಜೆ. ಜಾರ್ಜ್(ಭಾರತೀನಗರ).—ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತರತ್ನ ಶ್ರೀ ಕಾಮರಾಜ್ ನಾಡಾರ್‌ರವರ ಪ್ರತಿಮೆಯನ್ನು ಕಾಮರಾಜ್ ರಸ್ತೆಯಲ್ಲಿ ಇಡಲು ಯೋಜನೆ ಇದೆಯೇ?

ಆ) ಇದರ ಬಗ್ಗೆ ಯಾವುದಾವರೂ ಸಂಸ್ಥೆ ಪತ್ರ ವ್ಯವಹಾರ ಮಾಡಿದೆಯೇ ?

ಇ) ಇದರ ಬಗ್ಗೆ ಒಪ್ಪಿಗೆ ಕೊಡದಿರಲು ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ

ಆ) ಭಾರತರತ್ನ ಶ್ರೀ ಕಾಮರಾಜ್ ಸರ್ವಪಕ್ಷ ಪ್ರತಿಮೆ ಕಮಿಟಿ ನಂ. ೨೦. ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-೫೬೦೦೦೫ ರವರ ಪತ್ರ ವ್ಯವಹಾರ ಮಾಡಿದ್ದಾರೆ

ಇ) ಭಾರತ ರತ್ನ ಶ್ರೀ ಕಾಮರಾಜ್ ಸರ್ವಪಕ್ಷ ಪ್ರತಿಮೆ ಕಮಿಟಿ ರಿಜಿಸ್ಟ್ರಾರ್ ಆಫ್ ಸೊಸೈಟಿಯಿಂದ ನೋಂದಣಿ ಪಡೆದ ಬಗ್ಗೆ ಮಾಹಿತಿ ಒದಗಿಸದೇ ಇದ್ದ ಕಾರಣ ಬೆಂಗಳೂರು ಮಹಾನಗರ ಪಾಲಿಕೆ ಒಪ್ಪಿಗೆ ಕೊಟ್ಟಿರಲಿಲ್ಲ ತದನಂತರ ಈಗ ರಿಜಿಸ್ಟ್ರಾರ್ ಸೊಸೈಟಿಯಿಂದ ನೊಂದಣಿ ಪತ್ರವನ್ನು ಪಡೆದು ಕಳುಹಿಸಿರುತ್ತಾರೆ. ಈಗ ಭಾರತರತ್ನ ಶ್ರೀ ಕಾಮರಾಜ್ ನಾಡಾರ್‌ರವರ ಪ್ರತಿಮೆ ಕಾಮರಾಜ್ ರಸ್ತೆಯಲ್ಲಿ ಇಡಲು ಸರ್ಕಾರಕ್ಕೆ ಕೊಡುವ ವಿಷಯ ಮಹಾನಗರ ಪಾಲಿಕೆಯ ಪರಿಶೀಲನೆಯಲ್ಲಿದೆ.

ಪ್ರ. ಸಂ. ೨೫೩ (೪೮೨)

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಭಾರತರತ್ನ ಕಾಮರಾಜ್‌ರವರು ರಾಷ್ಟ್ರನಾಯಕರಾಗಿದ್ದರು. ಅವರ ವಿಚಾರದಲ್ಲಿ ಶ್ರೀಮಾನ್ ದೇವರಾಜ್ ಅರಸರು ಅವರು ಮುಖ್ಯಮಂತ್ರಿಗಳಾಗಿದ್ದಾಗ ರಸ್ತೆ ಒಂದಕ್ಕೆ ಕಾಮರಾಜ್‌ರವರ ಹೆಸರಿನ್ನಿಟ್ಟಿದ್ದರು. ಮೊನ್ನೆ ತಾನೆ ಕೇಂದ್ರ ಸರ್ಕಾರದವರು ಅವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿಸಿದ್ದಾರೆ. ಅದನ್ನು ಸ್ವತಃ ಪ್ರಧಾನಮಂತ್ರಿಯವರೇ ಉದ್ಘಾಟನೆ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರವೇ ಮುಂದೆ ಬಂದು ಪ್ರತಿಮೆ ಸ್ಥಾಪನೆ ಮಾಡಬೇಕಾಗಿತ್ತು. ಎಲ್ಲಾ ಪಕ್ಷಗಳವರು ಮುಂದೆ ಬಂದು ನಮಗೆ ಜಾಗ ಕೊಡಿ ನಾವೇ ಮಾಡುತ್ತೇವೆಂದು ಹೇಳಿದಾಗ ಬೆಂಗಳೂರು ನಗರ ಸಭೆಯವರು ಇದಕ್ಕೆ ಅನುಮತಿ ಕೊಟ್ಟಿಲ್ಲ. ದಯವಿಟ್ಟು ಆದಷ್ಟು ಬೇಗನೆ ಸರ್ಕಾರದಿಂದ ಈ ಪ್ರತಿಮೆಯನ್ನು ಇಟ್ಟರೆ ಒಳ್ಳೆಯದು ಅಥವಾ ಸರ್ವಪಕ್ಷದಿಂದ ಈ ಪ್ರತಿಮೆಯನ್ನು ಇಡುವ ಕೆಲಸ ಮಾಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಮಹಾನಗರ ಪಾಲಿಕೆಯವರನ್ನು ಅವರು ಈ ಕೆಲಸಕ್ಕೆ ಕೇಳಿದ್ದಾರೆ. ಅವರು ನಿರ್ಣಯ ಮಾಡಲಿ, ಅವರು ಆಗುವುದಿಲ್ಲ ಎಂದ ಮೇಲೆ ಮುಂದೆ ಏನು ಮಾಡಬೇಕೆಂದು ಹೇಳಿದ್ದೀರಿ, ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಕಾರ್ಪೊರೇಷನ್‌ನವರು ರಾಜಕೀಯ ಮಾಡಿ ತಡ ಮಾಡುತ್ತಿದ್ದಾರೆ ಅವರು ಜನತಾ ಪಕ್ಷದ ಹಾಗೂ ಕಾಂಗ್ರೆಸ್ ಪಕ್ಷದ ನಾಯಕರು ಆಗಿದ್ದರು ಈಗ ಏತಕ್ಕೆ ರಾಜಕೀಯ ತರುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು

ಶ್ರೀ ಎ. ಲಕ್ಷ್ಮೀಸಾಗರ್.—ರಾಜಕೀಯ ಪ್ರಶ್ನೆ ಇದರಲ್ಲಿ ಇಲ್ಲ. ಇದಕ್ಕೆ ಕೆಲವರು ಆರ್ಜಿಯನ್ನು ಹಾಕಿದ್ದಾರೆ. ಈ ನಿಮ್ಮ ಸಮಿತಿ ರಿಜಿಸ್ಟರು ಆಗಿದೆಯೋ, ಇಲ್ಲವೋ ಎಂದು ಕೇಳಿದ್ದಾರೆ, ಮೊದಲು ಅವನ್ನು ಕೊಟ್ಟಿರಲಿಲ್ಲ. ಈಗ ರಿಜಿಸ್ಟರ್ ಮಾಡಿ ಕೊಂಡಿರುವುದು ಕೊಟ್ಟಿದ್ದಾರೆ, ಅವರು ಮಾಡದೇ ಇದ್ದರೆ, ಮುಂದೆ ಹೇಗೆ ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡೋಣ.

ಪಿರಿಯಾ ಪಟ್ಟಣದಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ

೭೭೮. ಶ್ರೀ ಕೆ. ವೆಂಕಟೇಶ್(ಪಿರಿಯಾ ಪಟ್ಟಣ)—.ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಸುವರೇ ?

ಅ) ಪಿರಿಯಾ ಪಟ್ಟಣ ಟೌನಿನಲ್ಲಿ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ನೀಗಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಗಮನಾರ್ಹವಾದ ತೊಂದರೆ ಕಂಡು ಬಂದಿಲ್ಲ.

ಆ) ೨೦ ಲಕ್ಷರೂ.ಗಳ ಅಂದಾಜು ವೆಚ್ಚದ ನೀರು ಸರಬರಾಜು ಸುಧಾರಣಾ ಯೋಜನೆಯೊಂದನ್ನು ನಿಯೋಜಿಸಿದ್ದು, ಇದರ ಅಂದಾಜು ವೆಚ್ಚ ಪಟ್ಟಿ ಹಾಗೂ ನಕ್ಷೆಗಳು ತಯಾರಿಕಾ ಹಂತದಲ್ಲಿದ್ದು. ಈ ಯೋಜನೆಯನ್ನು ೭ನೇ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲಾಗಿದೆ.

ಶ್ರೀ ಕೆ. ವೆಂಕಟೇಶ.—ಮಾನ್ಯ ಸಚಿವರು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದಾಜು ವೆಚ್ಚ ತಯಾರಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಹೊಸ ಯೋಜನೆಯಲ್ಲಿ ಇದು ಯಾವಾಗ ಆಗುತ್ತದೆ ಎಂದು ನಿರ್ದಿಷ್ಟವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.